Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**(EXTRAORDINARY)**

ವಿಶೇಷ ಸಂಚಿಕೆ

**भाग IX** **अनुभाग 1**

PART IX SECTION 1

ಭಾಗ IX ವಿಭಾಗ 1

**प्राधिकार से प्रकाशित**

Published by Authority

ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| **सं–1** | **नई दिल्ली सोमवार, डिसेम्बर 22, 1986** | **पुष्य 1, 1908 (शक)** | **खन्ड–6** |
| No. 1 | New Delhi Monday, December 22, 1986 | Pushya 1, 1908 (Saka) | Vol. 6 |
| ಸಂಖ್ಯೆ ೧ | ನವದೆಹಲಿ ಸೋಮವಾರ, ಡಿಸೆಂಬರ್ ೨೨, ೧೯೮೬ | ಪುಷ್ಯ ೧, ೧೯೦೮ (ಶಕ) | ಸಂಪುಟ ೬ |

## MINISTRY OF LAW AND JUSTICE

(Legislative Department)

New Delhi, October 30, 1986

The translations in Kannada of the following namely—(1) The All India Services Act, 1951 (2) The Muslim Personal Law (Shariat) Application Act, 1937 (3) The Identification of Prisoners Act, 1920 (4) The Government Saving Certificates Act, 1959 (5) The Indian Fisheries Act, 1897 (6) The Indian Christian Marriage Act, 1872 (7) The Census Act, 1948 (8) The Seamen's Provident Fund Act, 1966 (9) The Asian Development Bank Act, 1966 10) The Official Secrets Act, 1923.

ಕೆಳಕಂಡ ಅಧಿನಿಯಮಗಳು ಎಂದರೆ (೧) ಅಖಿಲ ಭಾರತ ಸೇವಾ ಅಧಿನಿಯಮ, ೧೯೫೧ (೨) ಮುಸ್ಲಿಮರ ವೈಯಕ್ತಿಕ ಕಾನೂನು (ಷರೀಯತ್) ಅನ್ವಯ ಅಧಿನಿಯಮ, ೧೯೩೭ (೩) ಬಂಧಿಗಳನ್ನು ಗುರ್ತಿಸುವ ಅಧಿನಿಯಮ, ೧೯೨೦ (೪) ಸರ್ಕಾರೀ ಉಳಿತಾಯ ಪ್ರಮಾಣ ಪತ್ರ ಅಧಿನಿಯಮ, ೧೯೫೯ (೫) ಭಾರತ ಮೀನುಗಾರಿಕೆ ಅಧಿನಿಯಮ, ೧೮೯೭ (೬) ಭಾರತೀಯ ಕ್ರೈಸ್ತರ ವಿವಾಹ ಅಧಿನಿಯಮ, ೧೮೭೨ (೭) ಜನಗಣತಿ ಅಧಿನಿಯಮ, ೧೯೪೮ (೮) ನಾವಿಕರ ಭವಿಷ್ಯ ನಿಧಿ ಅಧಿನಿಯಮ, ೧೯೬೬ (೯) ಏಷ್ಯಾ ಅಭಿವೃದ್ಧಿ ಬ್ಯಾಂಕ್ ಅಧಿನಿಯಮ, ೧೯೬೬ (೧೦) ಸರ್ಕಾರಿ ರಹಸ್ಯ ಅಧಿನಿಯಮ, ೧೯೨೩.

ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ ಅಧಿನಿಯಮ, ೧೯೭೩ ರ (೧೯೭೩ ರ ೫೦) ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

**ಅಖಿಲ ಭಾರತ ಸೇವಾ ಅಧಿನಿಯಮ, 1951**

(1951ರ ಅಧಿನಿಯಮ ಸಂಖ್ಯೆ 61)

[29ನೇ ಅಕ್ಟೋಬರ್, 1951.]

ಒಕ್ಕೂಟಕ್ಕೆ ಮತ್ತು ರಾಜ್ಯಗಳಿಗೆ ಒಂದೇ ಆದ ಅಖಿಲ ಭಾರತ ಸೇವೆಗಳಿಗೆ ನೇಮಕಾತಿ ಮಾಡುವುದನ್ನು ಮತ್ತು ನೇಮಕಗೊಂಡ ವ್ಯಕ್ತಿಗಳ ಸೇವಾ ಷರತ್ತುಗಳನ್ನು ವಿನಿಯಮಿಸುವ ಒಂದು ಅಧಿನಿಯಮ.

ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

**1. ಚಿಕ್ಕ ಹೆಸರು.–** ಈ ಅಧಿನಿಯಮವನ್ನು ಅಖಿಲ ಭಾರತ ಸೇವಾ ಅಧಿನಿಯಮ, 1951 ಎಂದು ಕರೆಯತಕ್ಕದ್ದು.

**2. ಪರಿಭಾಷೆ.–** ಈ ಅಧಿನಿಯಮದಲ್ಲಿನ "ಅಖಿಲ ಭಾರತ ಸೇವೆ" ಎಂಬ ಪದಾವಳಿಗೆ, ಭಾರತ ಆಡಳಿತ ಸೇವೆ ಎಂದು ಕರೆಯಲಾಗುವ ಅಥವಾ ಭಾರತ ಪೊಲೀಸು ಸೇವೆ ಎಂದು ಕರೆಯಲಾಗುವ ಅಥವಾ 2ಎ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ಇತರ ಸೇವೆ ಎಂದು ಅರ್ಥ.

**2ಎ. ಇತರ ಅಖಿಲ ಭಾರತ ಸೇವೆಗಳು.–** ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಬಗ್ಗೆ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಈ ಕೆಳಗಿನ ಅಖಿಲ ಭಾರತ ಸೇವೆಗಳನ್ನು ರಚಿಸತಕ್ಕದ್ದು ಮತ್ತು ಬೇರೆ ಬೇರೆ ಸೇವೆಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು, ಎಂದರೆ:-

1. ಭಾರತ ಇಂಜನಿಯರ್‌ಗಳ ಸೇವೆ (ನೀರಾವರಿ, ವಿದ್ಯುಚ್ಛಕ್ತಿ, ಕಟ್ಟಡ ಮತ್ತು ರಸ್ತೆಗಳು);

2. ಭಾರತ ಅರಣ್ಯ ಸೇವೆ;

3. ಭಾರತ ವೈದ್ಯಕೀಯ ಮತ್ತು ಆರೋಗ್ಯ ಸೇವೆ.

**3. ನೌಕರಿ ಭರ್ತಿ ಮತ್ತು ಸೇವಾ ಷರತ್ತುಗಳ ವಿನಿಯಮನ.–** (1) ಕೇಂದ್ರ ಸರ್ಕಾರವು, ಸಂಬಂಧಪಟ್ಟ ರಾಜ್ಯಗಳ ಸರ್ಕಾರಗಳೊಂದಿಗೆ ಸಮಾಲೋಚಿಸಿದ ತರುವಾಯ ಮತ್ತು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ ಅಖಿಲ ಭಾರತ ಸೇವೆಗೆ ನೇಮಕಾತಿ ಮಾಡಲು ಹಾಗೂ ನೇಮಕಗೊಂಡ ವ್ಯಕ್ತಿಗಳ ಸೇವಾ ಷರತ್ತುಗಳನ್ನು ವಿನಿಯಮನಗೊಳಿಸಲು ನಿಯಮಗಳನ್ನು ರಚಿಸಬಹುದು.

(1ಎ) ನಿಯಮಗಳನ್ನು ರಚಿಸಲು ಈ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವು ನಿಯಮಗಳನ್ನು ಅಥವಾ ಅವುಗಳ ಪೈಕಿ ಯಾವುದೇ ನಿಯಮವನ್ನು ಈ ಅಧಿನಿಯಮವು ಪ್ರಾರಂಭವಾದ ದಿನಾಂಕಕ್ಕಿಂತ ಮುಂಚಿತವಲ್ಲದ ದಿನಾಂಕದಿಂದ ಪೂರ್ವಾನ್ವಯವಾಗಿ ಜಾರಿಗೆ ತರುವ ಅಧಿಕಾರವನ್ನು ಒಳಗೊಂಡಿರತಕ್ಕದ್ದು. ಆದರೆ ಅಂಥ ನಿಯಮವು ಯಾರಿಗೆ ಅನ್ವಯವಾಗಬಹುದೋ ಆ ಯಾರೇ ವ್ಯಕ್ತಿಯ ಹಿತಾಸಕ್ತಿಗಳಿಗೆ ಪ್ರತಿಕೂಲವಾಗಿ ಬಾಧಕವಾಗುವ ಹಾಗೆ ಯಾವುದೇ ನಿಯಮವನ್ನು ಪೂರ್ವಾನ್ವಯವಾಗಿ ಜಾರಿಗೆ ತರತಕ್ಕದ್ದಲ್ಲ.

(2) ಕೇಂದ್ರ ಸರ್ಕಾರವು ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು ಅಂಥ ಯಾವುದೇ ನಿಯಮದ ಮೇರೆಗೆ ಅಥವಾ ಅದರ ಅನುಸರಣೆಯಲ್ಲಿ ರಚಿಸಿದ ಪ್ರತಿಯೊಂದು ವಿನಿಯಮನವನ್ನು, ಅಂಥ ನಿಯಮವನ್ನು ಅಥವಾ ವಿನಿಯಮನವನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ನಿರಂತರವಾಗಿ ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನದ ನಿಕಟೋತ್ತರದ ಅಧಿವೇಶನವು ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ಮುಕ್ತಾಯಕ್ಕೆ ಮುಂಚೆ, ಅಂಥ ನಿಯಮ ಅಥವಾ ವಿನಿಯಮನದಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಅಂಥ ನಿಯಮ ಅಥವಾ ವಿನಿಯಮನವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಅಥವಾ ವಿನಿಯಮನವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರವೇ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ಧತಿಯು ಆ ನಿಯಮದ ಅಥವಾ ವಿನಿಯಮನದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**4. ಅಸ್ತಿತ್ವದಲ್ಲಿರುವ ನಿಯಮಗಳ ಮುಂದುವರಿಕೆ.–** ಈ ಅಧಿನಿಯಮದ ಪ್ರಾರಂಭದ ನಿಕಟ ಪೂರ್ವದಲ್ಲಿ ಜಾರಿಯಲ್ಲಿದ್ದ ಮತ್ತು ಅಖಿಲ ಭಾರತ ಸೇವೆಗೆ ಅನ್ವಯಿಸುವ ಎಲ್ಲಾ ನಿಯಮಗಳು ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು ಅವುಗಳನ್ನು ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳೆಂದು ಭಾವಿಸತಕ್ಕದ್ದು.

* * * * *